# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ.

## ಸಿ.ಸಿ. ಸಂಖ್ಯೆ : 1060/2024

**ಡಿಡಬ್ಲ್ಯೂ -1**

| | | |
|---|---|---|
| **ಹೆಸರು** | : | ಸಿದ್ದಿಕ್ |
| **ತಂದೆಯ ಹೆಸರು** | : | ಸೈಯದಲ್ವಿ |
| **ವಯಸ್ಸು** | : | 38 ವರ್ಷ |
| **ಉದ್ಯೋಗ** | : | ಚಾಲಕ |
| **ವಾಸಸ್ಥಳ** | : | ಕಲ್ಲುಬಾಣೆ ಗ್ರಾಮ |

**ದಿನಾಂಕ : 09-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಆರೋಪಿ ಶ್ರೀ. ಎನ್ ಕೆ ಎಂ ವಕೀಲರಿಂದ :-**

1. ನಾನು ಪಿರ್ಯಾದಿ ಸೊಸೈಟಿಯಿಂದ ರೂ. ಐವತ್ತು ಸಾವಿರ ಸಾಲವನ್ನು ಪಡೆದಿರುತ್ತೇನೆ. ಅದರಲ್ಲಿ ರೂ. ಇಪ್ಪತ್ತು ಸಾವಿರ ಹಣವನ್ನು ಪಿಗ್ಮಿ ಮುಖಾಂತರ ಮರುಪಾವತಿ ಮಾಡಿರುತ್ತೇನೆ. ಉಳಿಕೆ ರೂ. ಮೂವತ್ತು ಸಾವಿರ ಹಣವನ್ನು ಹಂತ ಹಂತವಾಗಿ ಮರು ಪಾವತಿ ಮಾಡಿರುತ್ತೇನೆ. ಪಿರ್ಯಾದಿ ಸೊಸೈಟಿಯವರು ಸಾಲ ನೀಡುವ ಸಂದರ್ಭದಲ್ಲಿ ನನ್ನಿಂದ ಒಂದು ಖಾಲಿ ಚೆಕ್ ನ್ನು ಪಡೆದಿದ್ದರು. ಸದರಿ ಚೆಕ್ ನ್ನು ಅವರೇ ಭರ್ತಿ ಮಾಡಿರುತ್ತಾರೆ. ನನ್ನ ಮೇಲೆ ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ.

2.ಆರೋಪಿಯು ನ್ಯಾಯಾಲಯಕ್ಕೆ ಪಿರ್ಯಾದಿಗೆ ದಾಖಲೆಯನ್ನು ಹಾಜರುಪಡಿಸುವಂತೆ ಅರ್ಜಿಯನ್ನು ಸಲ್ಲಿಸಿದ್ದು, ಅದರಂತೆ ದೂರುದಾರರು ದಿನಾಂಕ 17-09-2025 ರಂದು ಒಂದು ದಾಖಲೆಯನ್ನು ಸಲ್ಲಿಸಿರುತ್ತಾರೆ. ಆ ದಾಖಲೆ ಆರೋಪಿಯು ಪಿಗ್ಮಿ ಮುಖಾಂತರ

ಕಟ್ಟಿರುವ ಹಣದ ದಾಖಲೆ ಆಗಿರುತ್ತದೆ. ಸದರಿ ದಾಖಲೆಯು ಆರೋಪಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ1 ಎಂದು ಗುರುತಿಸಲಾಯಿತು.

ಆದ್ದರಿಂದ, ಪಿರ್ಯಾದಿ ನೀಡಿರುವ ದೂರನ್ನು ವಜಾ ಮಾಡಿ, ನನಗೆ ನ್ಯಾಯ ಒದಗಿಸಿಕೊಡಬೇಕೆಂದು ತಮ್ಮಲ್ಲಿ ಈ ಮೂಲಕ ತಮ್ಮಲ್ಲಿ ಕೋರಿ ಕೊಳ್ಳುತ್ತೇನೆ.

ಮುಖ್ಯ ವಿಚಾರಣೆ ಮುಕ್ತಾಯ.

ದೂರುದಾರರ ಪರ ವಕೀಲರು ಪಾಟಿ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-

(ಪ್ರದೀಪ ಪೋತದಾರ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.